ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 74/2023**

ಪ್ರ.ವ.ಬೋ.ತಾಃ 30-12-2025

ಚಾಸಾಃ 6 ಪ್ರಾಸಾಃ 6

| | |
|---|---|
| ಸಾಕ್ಷಿಯ ಹೆಸರು | ರಾಜಶೇಖರ್ |
| ತಂದೆ/ಗಂಡನ ಹೆಸರು | ರಂಗಶಾಮಯ್ಯ |
| ವಯಸ್ಸು | 58 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಬ್ಯಾಲ್ಯ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ 1 ನೇ ಆರೋಪಿ ಗೊತ್ತು. ಈ ದಿನ 2 ನೇ ಆರೋಪಿ ಗೈರುಹಾಜರಾಗಿದ್ದು, 2 ನೇ ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಕೋರಿ ಅವರ ಹಾಜರಾತಿಗೆ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ-ಮಾನ್ಯ ಸ.ಸ.ಅ. ರವರಿಂದಃ-**

ನಾನು 2021 ನೇ ಸಾಲಿನಲ್ಲಿ ಬ್ಯಾಲ್ಯ ಗ್ರಾಮಪಂಚಾಯಿತಿಯ 2 ನೇ ಬ್ಲಾಕ್ ನ ಸದಸ್ಯನಾಗಿರುತ್ತೇನೆ. 1997 ನೇ ಸಾಲಿನಲ್ಲಿ 1 ನೇ ಆರೋಪಿ ಬ್ಯಾಲ್ಯ ಗ್ರಾಮ

ಪಂಚಾಯಿತಿಯ ಜವಾನ ಹುದ್ದೆಗೆ ನೇಮಕಗೊಂಡಿದ್ದು, ಆನಂತರ 2007 ನೇ ಸಾಲಿನಲ್ಲಿ ಆ ಪಂಚಾಯಿತಿಯ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. 2 ನೇ ಆರೋಪಿ ದಿಃ 30.09.2020 ರಿಂದ 08.04.2022 ರವರೆಗೆ ಬ್ಯಾಲ್ಯ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಪಂಚಾಯಿತಿಯ ಸದಸ್ಯನಾಗಿದ್ದ ಸಮಯದಲ್ಲಿ ಆ ಗ್ರಾಮ ಪಂಚಾಯಿತಿಯ ನೌಕರರುಗಳಿಗೆ ವೇತನ ಬಿಡುಗಡೆ ಆಗದೇ ಬಾಕಿ ಇತ್ತು ಎಂದರೆ ಸರಿಯಲ್ಲ. 1 ನೇ ಆರೋಪಿಗೆ 2020 ನೇ ಸಾಲಿನಲ್ಲಿ ಜೂನ್ ಮತ್ತು ಜುಲೈ ಮಾಹೆಯ ವೇತನ ಪಾವತಿಸಿದ್ದರೂ ಸಹ 1 ಮತ್ತು 2 ನೇ ಆರೋಪಿತರು ಷಾಮೀಲಾಗಿ ಸರ್ಕಾರದ ಹಣ ದುರುಪಯೋಗಪಡಿಸಿಕೊಳ್ಳಲು ಉದ್ದೇಶಿಸಿ ಜೂನ್ 2020 ರಿಂದ ಜನವರಿ 2021 ರವರೆಗಿನ ಒಟ್ಟು 8 ತಿಂಗಳ ಸಂಬಳವನ್ನು ದಿಃ 03.08.2021 ರಂದು ಪುನಃ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ರೂ.27,396/-ರ ಬದಲಿಗೆ ರೂ.27,813/- ಗಳನ್ನು 1 ನೇ ಆರೋಪಿಗೆ ಮಂಜೂರು ಮಾಡಿ, ಹೆಚ್ಚುವರಿಯಾಗಿ ರೂ.417/- ಗಳನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸಹಾಯಕ ಲೆಕ್ಕಾಧಿಕಾರಿಗಳು ಪರಿಶೀಲನೆ ಮಾಡಿ ನೋಡಿದ ಸಮಯದಲ್ಲಿ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ 1 ಮತ್ತು 2 ನೇ ಆರೋಪಿತರು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಅಲ್ಲಗೆಳೆದ ಹೇಳಿಕೆ ಭಾಗವನು ನಿಪಿ.12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– 2 ನೇ ಆರೋಪಿಯ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ**– ಏನೂ ಇಲ್ಲ.

ಈ ಹಂತದಲ್ಲಿ 1 ನೇ ಆರೋಪಿಯ ಪರ ಯಾರೂ ಪ್ರತಿನಿಧಿಸದೇ ಇರುವ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ